ಶ್ರೀ ಹಂಪನಗೌಡ ಬಾದರ್ಲಿ : ಅದರ ಬಗ್ಗೆ ಮಾತನಾಡುವಿರಂತೆ.

(ಅಡಚಣೆ)

ಕುಡಿಯುವ ನೀರಿನ ಕೆರೆ ಇದೆ. ಅದು ಸುಮಾರು ಒಂದು ಲಕ್ಷ ಜನಸಂಖ್ಯೆ ಇರುವಂಥ ಪಟ್ಟಣ. ಆ ಕೆರೆ ಒಡ್ಡು ಕುಸಿದು ಇವತ್ತು 4 ತಿಂಗಳು storage ಮಾಡತಕ್ಕಂಥ.....

ಶ್ರೀ ಬಿ.ಆರ್. ಪಾಟೀಲ್ : ವಿಷಯ ಬೇರೆ ಚರ್ಚೆಯಾಗುತ್ತಿದೆ. ಇನ್ನೂ ವಿಷಯ ಮುಕ್ತಾಯವಾಗಿಲ್ಲ. ನಾನು ಅಧ್ಯಕ್ಷರ ಅಪ್ಪಣೆ ಕೋರುತ್ತಿದ್ದೇನೆ.

(ಅಡಚಣೆ)

ಶ್ರೀ ಹಂಪನಗೌಡ ಬಾದರ್ಲಿ : ನಾನು ಬೆಳಗ್ಗೆಯೇ ಹೋಗಿ ಅಧ್ಯಕ್ಷರನ್ನು ಭೇಟಿ ಮಾಡಿ.....

(ಅಡಚಣೆ)

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ. ಏಕೆ ಈ ತರಹ ನೀವು ನೀವೇ ಮಾಡುತ್ತಿದ್ದೀರಿ?

ಶ್ರೀ ಬಿ.ಆರ್. ಪಾಟೀಲ್ : ಸಾರ್, ನಾನು ನಿಮ್ಮ ಅಪ್ಪಣೆ ಕೇಳುತ್ತಿದ್ದೇನೆ.

ಅಧ್ಯಕ್ಷರು : ನೀವು ಅಪ್ಪಣೆ ಕೇಳುತ್ತಿದ್ದೀರಿ. ಅವರು ಅಪ್ಪಣೆ ಪಡೆದುಕೊಂಡಿದ್ದಾರೆ. ಕುಳಿತುಕೊಳ್ಳಿ. ಅದು ಬೇರೆ issue.

ಶ್ರೀ ಬಿ.ಆರ್. ಪಾಟೀಲ್ : ನಾನು ಆ issue ಬಗ್ಗೆಯೇ ಮಾತನಾಡಬೇಕಾಗಿದೆ. ನನ್ನದು ಬೇರೆ ವಿಷಯವೇನಿಲ್ಲ. ನನಗೆ ಅದೇ ವಿಷಯದ ಬಗ್ಗೆ ಮಾತನಾಡಬೇಕಾಗಿದೆ. ಸಣ್ಣ ನೀರಾವರಿ ಸಚಿವರು, ಉಪ ಮುಖ್ಯಮಂತ್ರಿಗಳೂ ಕೂಡ ಇಲ್ಲಿದ್ದಾರೆ.

ಅಧ್ಯಕ್ಷರು : ಅದಾದ ಮೇಲೆ ನಿಮಗೆ ಅವಕಾಶ ಕೊಡುತ್ತೇನೆ. ಕುಳಿತುಕೊಳ್ಳಿ.

ಶ್ರೀ ಬಿ.ಆರ್. ಪಾಟೀಲ್ : ಈ ತರಹ ನೀವು ನಮಗೆ ನಿರಾಸೆ ಮಾಡಿದರೆ, ಈ ಉತ್ತರ ಕರ್ನಾಟಕದ ಬಹಳ ಮುಖ್ಯವಾದ.....

ಶ್ರೀ ಹಂಪನಗೌಡ ಬಾದರ್ಲಿ : ಪಾಟೀಲರೆ, ಅವಕಾಶ ಕೊಡುತ್ತೇನೆಂದು ಹೇಳುತ್ತಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಸುಮ್ಮನೆ ಹೇಳಬೇಕೆಂದು ಹೇಳುತ್ತಿದ್ದೀರಿ. ಖಂಡಿತ ನಾವು ಕೊಟ್ಟಿದ್ದೇವೆ. ಇನ್ನೂ ಕೊಡುತ್ತೇವೆ.

ಶ್ರೀ ಬಿ.ಆರ್. ಪಾಟೀಲ್ : ವಿಷಯ ಚರ್ಚೆಗೆ ಬಂದಿದ್ದರಿಂದ ನಾನು ಸಾಂದರ್ಭಿಕವಾಗಿ ಹೇಳುತ್ತಿದ್ದೇನೆ. ಅಪ್ಪಣೆ ಕೊಟ್ಟರೆ ಮಾತನಾಡುತ್ತೇನೆ. ಇಲ್ಲದಿದ್ದರೆ ಇಲ್ಲ.

(ಆ) ವಿಷಯ : ಸಿಂಧನೂರು ಕುಡಿಯುವ ನೀರಿನ ಕೆರೆ ನಿರ್ಮಾಣದ ಬಗ್ಗೆ.

ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) : ಸಿಂಧನೂರು ಕುಡಿಯುವ ನೀರಿನ ಕೆರೆ ಸುಮಾರು 4 ತಿಂಗಳು storage ಇರತಕ್ಕಂಥ ಕೆರೆ. ಆ ಕೆರೆಯ ಒಂದು ಭಾಗ ಬಂಡು ಕುಸಿದು ಈಗ ಆ ಕೆರೆಯಲ್ಲಿ ನೀರು ನಿಲ್ಲಲಾರದ ಪರಿಸ್ಥಿತಿಯಾಗಿದೆ. ಈಗಾಗಲೇ ಮಾನ್ಯ

ಮುಖ್ಯಮಂತ್ರಿಗಳಿಗೆ, ಸಂಬಂಧಪಟ್ಟ ಕಾರ್ಯದರ್ಶಿಗಳಿಗೂ ಕೂಡ ನಾವು ಪತ್ರಗಳನ್ನು ಬರೆದು 3 ತಿಂಗಳಾಯಿತು. ಕೆರೆ ತುಂಬಬೇಕಾಕರೆ, ಆ ಕೆರೆ ನೀರು ಸಂಗ್ರಹಣೆ ಮಾಡಬೇಕಾದರೆ minimum 3 ತಿಂಗಳು ಬೇಕಾಗುತ್ತದೆ. ಇಂಥ ಪರಿಸ್ಥಿತಿ ಇರುವುದರಿಂದ ತಮ್ಮ ಮೂಲಕ ಸಂಬಂಧಪಟ್ಟ ಮಾನ್ಯ ಸಚಿವರಿಗೆ ನಾನು ಒತ್ತಾಯ ಮಾಡುವುದಿಷ್ಟೆ, ಬೇಗನೆ ತಾತ್ಕಾಲಿಕವಾಗಿ ಕೆರೆಯ ನಿರ್ಮಾಣದ ಕೆಲಸವನ್ನು ಪ್ರಾರಂಭ ಮಾಡಿ, ನೀರನ್ನು ಸಂಗ್ರಹಣೆ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡತಕ್ಕಂಥ ಕೆಲಸವನ್ನು ಸರ್ಕಾರ ಮಾಡಬೇಕೆಂಬ ಒತ್ತಾಯವನ್ನು ತಮ್ಮ ಮೂಲಕ ಮಾಡುವುದಕ್ಕೆ ಇಚ್ಛಿಪಡುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಇಗ ತಾನೇ ಪ್ರಸ್ತಾಪ ಮಾಡಿದ್ದಾರೆ. ಅವರನ್ನು ಕರೆದು, ಸಮಸ್ಯೆ ಏನೆಂದು ಕೇಳಿ ಖಂಡಿತ ಅದರ ಕಡೆ ಗಮನ ಕೊಡುತ್ತೇನೆ.

ಶ್ರೀ ಬಿ.ಆರ್. ಪಾಟೀಲ್ : ನನ್ನ ವಿಷಯ ಏನೆಂದರೆ.....

(ಅಡಚಣೆ)

ಅಧ್ಯಕ್ಷರು : ಚರ್ಚೆ ಇಲ್ಲ. ಇವರು ಬೇರೆ ಕೆಲವು ವಿಚಾರಗಳ ಬಗ್ಗೆ ಕೊಟ್ಟಿದ್ದರು.

ಶ್ರೀ ಬಿ.ಆರ್. ಪಾಟೀಲ್ : ಸಣ್ಣ ನೀರಾವರಿ ಇಲಾಖೆ ನೇರವಾಗಿ ಉಪ ಮುಖ್ಯಮಂತ್ರಿಗಳಿಗೆ ಬರುತ್ತದೆ. ಇದಕ್ಕೆ ಈಶ್ವರಪ್ಪನವರು ಪೂರ್ವಭಾವಿಯಾಗಿ ನಿಂತು ಸಹಾಯ ಮಾಡಿದರೆ ನಾವೇನೂ ಬೇಡವೆಂದು ಹೇಳುವುದಿಲ್ಲ. ತಾವು ನೀರಾವರಿ ಸಚಿವರಾಗಿ ಖಂಡಿತ ಸಹಾಯ ಮಾಡಿ. ಆದರೆ, ಈ ವರ್ಷ 50 ಕೋಟಿ ರೂಪಾಯಿಗಳ ಅನುದಾನವನ್ನು ತಾವು ಸಣ್ಣ ನೀರಾವರಿ ಇಲಾಖೆಗೆ ಒದಗಿಸಿದ್ದೀರಿ. ನಮ್ಮ ವಿಜಾಪುರ್‌ನ ರೈತರು ಏನು ಬೇಡಿಕೆ ಇಡುತ್ತಿದ್ದಾರೆ, ಇದು ಅತ್ಯಂತ ಹೊಸ ಕಲ್ಪನೆ. ನಮ್ಮ ಭೀಮಾ ನದಿ ಮತ್ತು ಕೃಷ್ಣಾ ನದಿಯಲ್ಲಿ ಮಳೆಗಾಲದಲ್ಲಿ ನೀರು ಬಂದು ಹರಿದು ಹೋಗುತ್ತದೆ. Overflow ಆದಾಗ ಅದನ್ನು ಕೆರೆಗಳಿಗೆ ತುಂಬಿಸಬೇಕೆನ್ನುವುದು ಬಹಳ ಹೊಸ ಕಲ್ಪನೆ. ಹೊಸ ವಿಚಾರ. ಅದಕ್ಕೆ ತಾವು ಪೂರಕ budget ನಲ್ಲಿ 50 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ, ಹೋದ ವರ್ಷ 150 ಕೋಟಿ ರೂಪಾಯಿಗಳಿಗಿಂತ ಮೇಲ್ಪಟ್ಟು ಇತ್ತು. ಈಗೇನು ಸಚಿವರಾದ ಮಾನ್ಯ ಈಶ್ವರಪ್ಪನವರು ಭರವಸೆ ಕೊಡುತ್ತಿದ್ದಾರೆ, ತಾವು ಇನ್ನೂ supplementary budget ನಲ್ಲಿ ಬೇಡಿಕೆ ಇಟ್ಟು, ಒಟ್ಟಿಗೆ ತೆಗೆದುಕೊಂಡು ಹೆಚ್ಚಿಗೆ ಹಣ ಖರ್ಚು ಮಾಡಬೇಕೆನ್ನುತ್ತೀರೋ ಅಥವಾ ಯೋಜನೆ ಮಾಡಿ ಮುಂದಿನ ವರ್ಷ ಮಾಡಬೇಕೆನ್ನುತ್ತೀರೋ? ಈ ಬಗ್ಗೆ ಸ್ಪಷ್ಟತೆ ಬರಲಿ. ಏಕೆಂದರೆ, ರೈತರು ಧರಣಿ ಕುಳಿತಿದ್ದಾರೆ. ಇದು ಬಹಳ ಉತ್ತಮವಾದ ಕಲ್ಪನೆ. ಈ ಮಾತನ್ನು ಏಕೆ ಹೇಳುತ್ತೇನೆಂದರೆ, ಬಚಾವತ್ commission ನ 'B' scheme ನಲ್ಲಿ ಸಣ್ಣ ನೀರಾವರಿ ಕೆರೆಗಳನ್ನು ತೆಗೆದುಕೊಳ್ಳಬೇಕೆಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಈಗಾಗಲೇ ಆಂಧ್ರದವರು violate ಮಾಡಿ 'B' scheme ಅನ್ನು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಇಂಥ ಹೊಸ ವಿಚಾರ, ಕಲ್ಪನೆ ನಮ್ಮ ರೈತರಿಗೆ ಅನುಕೂಲವಾಗಬೇಕಾಗಿದ್ದರೆ, ಸಣ್ಣ ನೀರಾವರಿ ಸಚಿವರೂ ಆಗಿರುವ ಯಡಿಯೂರಪ್ಪನವರಿದ್ದಾರೆ, ಅವರಿಂದ ಏನಾದರೂ ಉತ್ತರ ಬಂದರೆ, ಒಂದು ಸ್ಪಷ್ಟತೆ ಸಿಗುತ್ತದೆ. ಹಣಕಾಸಿನ ಸಚಿವರೂ ಕೂಡ ಅವರೇ ಇದ್ದಾರೆ, ಸಣ್ಣ ನೀರಾವರಿ ಸಚಿವರೂ ಕೂಡ ಉಪ

ಮುಖ್ಯಮಂತ್ರಿಗಳೇ ಇದ್ದಾರೆ. ಹಾಗಾಗಿ, ಇಲಾಖೆ ನೇರವಾಗಿ ಅವರಿಗೆ ಸಂಬಂಧಪಟ್ಟಿರುವುದರಿಂದ ಅವರು ಏನು ಇದಕ್ಕೆ ಹಣಕಾಸಿನ ವ್ಯವಸ್ಥೆ ಮಾಡುತ್ತಾರೆ? ಯಾವ ತರಹ ಇದಕ್ಕೆ ಸ್ಪಂದಿಸುತ್ತಾರೆ ಎನ್ನುವುದನ್ನು ನಾನು ನಿರೀಕ್ಷೆ ಮಾಡುತ್ತಿದ್ದೇನೆ.

4.30 P.M.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸಚಿವರಾಗಿದ್ದಂಥ ಸಂದರ್ಭದಲ್ಲಿ ಇದೇ ಪ್ರಶ್ನೆ ಬಂದಾಗ ನಾನು ಇದನ್ನು ಪರಿಶೀಲನೆ ಮಾಡಿ ನೋಡುತ್ತೇನೆಂದು ಹೇಳಿದ್ದರು. ಆ ನೀರನ್ನು lift ಮಾಡಿ ಕೆರೆಗಳನ್ನು ತುಂಬಬೇಕು, ಅದು ಎಷ್ಟರಮಟ್ಟಿಗೆ ಸಾಧಕ ಬಾಧಕಗಳಿವೆ ಎಂದು ಪರಿಶೀಲನೆ ಮಾಡಬೇಕು. ನಾನೂ ಸಹ ಪರಿಶೀಲನೆ ಮಾಡುತ್ತೇನೆ. ನಾನು ಒಂದು ಮಾತನ್ನು ಅತ್ಯಂತ ಪ್ರಾಮಾಣಿಕತೆಯಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಎಲ್ಲಾ ಜಲಾಶಯಗಳು ತುಂಬಿ ತುಳುಕುತ್ತಿರುವಂಥ ಸಂದರ್ಭದಲ್ಲಿ ಆ ಜಲಾಶಯಗಳಿಂದ ಸುತ್ತಮುತ್ತಲಿನ ಕೆರೆಕಟ್ಟೆಗಳನ್ನು ತುಂಬಿಸುವುದರಿಂದ ಅಂತರ್ಜಲ ಕುಸಿದು ಹೋಗುವುದು ತಪ್ಪುತ್ತದೆ, ಬಾವಿಗಳಲ್ಲಿ ಬೇರೆ ಕಡೆಗಳಲ್ಲಿ ನೀರು ಸಿಗುತ್ತದೆ, ಯಾವ್ಯಾವುದೋ ಹೊಸ ಯೋಜನೆ ಮಾಡಿಕೊಂಡು ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕಿಂತ, ಅಲ್ಪ ಖರ್ಚಿನಲ್ಲಿ ಈ ರೀತಿ ಮಾಡುವಂಥದ್ದು ಅತ್ಯಂತ ಅಗತ್ಯ ಇರುವಂಥದ್ದು ಮತ್ತು ರಾಜ್ಯದ ಎಲ್ಲಾ ಕಡೆ ಮಾಡಬೇಕು, ಅಗತ್ಯವಾದರೆ ಹೆಚ್ಚಿನ ಅನುದಾನವನ್ನು ಕೂಡಿಸಿ ಕೊಡುವುದಕ್ಕೆ ಹೆಚ್ಚಿನ ಆದ್ಯತೆ ಕೊಡುವುದಕ್ಕೆ ನಾನು ಪರಿಶೀಲನೆ ಮಾಡುತ್ತೇನೆ. ಆದರೆ ಈ ಯೋಜನೆಯ ಬಗ್ಗೆ ಅದರ ಸಾಧಕ ಬಾಧಕಗಳ ಬಗ್ಗೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಗೊತ್ತಿದೆ, ಅವರು ಕೂಡ ಈ ಇಲಾಖೆಯಲ್ಲಿ ಕೆಲಸ ಮಾಡಿ ಅನುಭವ ಇರುವಂಥವರು, ನಾನು ಪರಿಶೀಲನೆ ಮಾಡಿ ಇದನ್ನು I come back to you ಚರ್ಚೆ ಮಾಡೋಣ, ಪರಿಶೀಲನೆ ಮಾಡೋಣ.

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ನೀರಾವರಿ ಸಚಿವರು ಭರವಸೆ ಕೊಟ್ಟಿದ್ದಾರೆ. ಉಪ ಮುಖ್ಯಮಂತ್ರಿಗಳು ಮತ್ತು ಸಣ್ಣ ನೀರಾವರಿ ಸಚಿವರು ಪರಿಶೀಲನೆ ಮಾಡೋಣ ಎಂದು ಹೇಳುತ್ತಾರೆ. ಇದರಲ್ಲಿ ಯಾವುದು ಸತ್ಯ?

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) : ನಾನು ಈ ಮಾತನ್ನು ತುಂಬಾ ಸ್ಪಷ್ಟವಾಗಿ ಹೇಳುತ್ತೇನೆ, ಬೆಳಿಗ್ಗೆ ತಾನೇ ಮಾನ್ಯ ಉಪ ಮುಖ್ಯಮಂತ್ರಿಗಳು ಮಾತನಾಡಿದ್ದಾರೆ. ಪರಿಶೀಲನೆ ಮಾಡಿ ಅದಕ್ಕೆ ಏನೇನು ಅನುಕೂಲ ಬೇಕೋ ಅದನ್ನು ಮಾಡಬೇಕು ಎಂದು ಹೇಳಿದ್ದಾರೆ. ಎಷ್ಟು ಹಣ ಬೇಕೋ ಕೊಡುತ್ತೇನೆಂದು ಹೇಳಿದ್ದಾರೆ. ಅದಕ್ಕೋಸ್ಕರ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ, 7ನೇ ತಾರೀಕು ಬಂದಾಗ ನಿಮಗೆ ಸಂತೃಪ್ತಿಯಾದ ಒಂದು ಹೆಜ್ಜೆ ಸರ್ಕಾರ ಇಡುತ್ತದೆ, ಇದರ ಬಗ್ಗೆ ಯಾವುದೂ ಅನುಮಾನ ಬೇಡ.